ಪಿ.ಡಬ್ಲ್ಯೂ: 01 (ಭಾರತಮ್ಮ)

ದಿನಾಂಕ: 30.07.2026 ರಂದು ಸಾಕ್ಷಿಯನ್ನು ಮಧ್ಯಂತರ ಅರ್ಜಿ ಸಂಖ್ಯೆ 5 ಮತ್ತು 6 ಆದೇಶದ ಮೇರೆಗೆ ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಕೆ ಎಸ್ ಆರ್ ವಕೀಲರಿಂದ:**

8. ನಂಜಪ್ಪ ಮತ್ತು ಚಂದ್ರಪ್ಪ ನಮ್ಮ ಕುಟುಂಬಕ್ಕೆ ಯಾವುದೇ ಸಂಬಂದವಿಲ್ಲದೇ ಇದ್ದರೂ ಕೂಡ ಅವರುಗಳು ನನ್ನ ತಾತ ಮತ್ತು ಮಾವ ಎಂದು ಹೇಳಿಕೊಂಡು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಂಜಪ್ಪ ರವರು ಅಕ್ಕಂದಿರು ಮತ್ತು ತಂಗಿಯಂದಿರ ಮದುವೆಯ ಮಾಡುವ ಸಲುವಾಗಿ ಸಾಲ ಮಾಡಿದ್ದು, ಸದರಿ ಸಾಲವನ್ನು ತೀರಿಸಲು ದಾವಾ ಆಸ್ತಿ ಸಂಖ್ಯೆ 11, 15 ಮತ್ತು 16 ಇವುಗಳನ್ನು ಪ್ರತಿವಾದಿ 4 ಮತ್ತು 5 ರವರಿಗೆ ಮಾರಾಟ ಮಾಡಲಾಗಿದೆ ಎಂದರೆ ಸರಿಯಲ್ಲ.
9. ಚಂದ್ರಪ್ಪ ರವರು ಅವರ ಕುಟುಂಬದ ಅವಶ್ಯಕತೆಗಾಗಿ ಜಮೀನುಗಳನ್ನು ಮಾರಾಟ ಮಾಡಿದ್ದು, ಅವರು ಮತ್ತು ನನ್ನ ನಡುವೆ ಯವುದೇ ಸಂಬಂಧವಿಲ್ಲ ಎಂದರೆ ಸಾಕ್ಷಿಯು ನಾನು ಅವರ ಅಕ್ಕನ ಮಗಳು ಎಂದು ನುಡಿಯುತ್ತಾರೆ. ನನ್ನ ತಾಯಿ ಎಂದು ಹೇಳುವ ಗಿರಿಜಮ್ಮ ರವರು ಪ್ರತಿವಾದಿಯವರ ಕುಟುಂಬಕ್ಕೆ ಸಂಬಂದ ಪಡುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ವಂಶವೃಕ್ಷವನ್ನು ಅನಧಿಕೃತವಾಗಿ ತಯಾರಿಸಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಮಾಡಿಸಿದ್ದ ವಂಶವೃಕ್ಷವನ್ನು ಇಲಾಖೆಯವರು ತಿರಸ್ಕರಿಸಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳಿಗೂ ಹಾಗೂ ನನಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.
10. ಪ್ರತಿವಾದಿಯವರ ಕುಟುಂಬದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇರುವುದರಿಂದ ನಾನು ವ್ಯಾಜ್ಯದ ಜಮೀನುಗಳ ಚಕ್ಕುಬಂದಿಗಳನ್ನು ತಪ್ಪಾಗಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ 1 ನೇ ಪ್ರತಿವಾದಿ ಮಾತ್ರ ಸ್ವಾಧೀನಾನುಭವದಲ್ಲಿದ್ದು,

ನಾನು ಸುಳ್ಳು ಚಕ್ಕುಬಂದಿಯನ್ನು ನಮೂದಿಸಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11. 1 ನೇ ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ನಾನೇ ಹೇಳುವಂತೆ ಅಪ್ತಾಬ್ ಹುಸೇನ್ ರವರ ಜಮೀನು ಬರುವುದಿಲ್ಲ ಹೊರತು ಈಡಿಗರ ಚನ್ನಗರಾಯಪ್ಪ ರವರ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಉತ್ತರಕ್ಕೆ ನಂಜುಂಡಗೌಡ ರವರ ಜಮೀನು ಇದ್ದು, ನಾನು ಹೇಳುವಂತೆ ಶಿವಕುಮಾರ್ ರವರ ಜಮೀನು ಬರುವುದಿಲ್ಲ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ನಲಪಾಡ್ ವೆಂಕಟರವಣಪ್ಪ ರವರ ಜಮೀನು ಇದ್ದು, ನಾನು ಹೇಳುವಂತೆ ಶಿವಕುಮಾರ್ ರವರ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ.

12. 2 ನೇ ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ತಲಾಯಿ ವೆಂಕಟೇಶಪ್ಪನ ಜಮೀನು ಬರುತ್ತದೆ ಹೊರತು ಸೊಣ್ಣೇಗೌಡರ ಜಮೀನು ಬರುವುದಿಲ್ಲ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ಕೊತ್ತನೂರು ವೆಂಕಟರಾಮಯ್ಯ ನವರ ಜಮೀನು ಬರುತ್ತದೆ ಹೊರತು ಸುಮಿತ್ರಮ್ಮ ರವರ ಜಮೀನು ಬರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಉತ್ತರಕ್ಕೆ ಕೆರೆ ಬರುತ್ತಿದ್ದು, ನಾನು ಹೇಳುವಂತೆ ಸೊಣ್ಣೇಗೌಡ ರವರ ಜಮೀನು ಬರುವುದಿಲ್ಲ ಎಂದರೆ ಸರಿಯಲ್ಲ.

13. 3 ನೇ ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ತಿಮ್ಮಕ್ಕ ರವರ ಜಮೀನು ಬರುತ್ತದೆ ಹೊರತು ಸುಬ್ಬಕ್ಕ ರವರ ಜಮೀನು ಬರುವುದಿಲ್ಲ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ಯಡಹಳ್ಳಿ ನಾರಾಯಣಗೌಡ ನವರ ಜಮೀನು ಬರುತ್ತದೆ ಹೊರತು ವೆಂಕಟರಾಮಯ್ಯ ರವರ ಜಮೀನು ಬರುವುದಿಲ್ಲ ಎಂದರೆ ಸರಿಯಲ್ಲ.

14. 4 ನೇ ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ರಾಮಕೃಷ್ಣಾಚಾರಿ ರವರ ಜಮೀನು ಬರುತ್ತದೆ ಹೊರತು ವೆಂಕಟರಾಮೇಗೌಡ ರವರ ಜಮೀನು ಬರುವುದಿಲ್ಲ ಎಂದರೆ ಸರಿಯಲ್ಲ.ಪಶ್ಚಿಮಕ್ಕೆ ಉರುಗುಂ ಬಾಷ ರವರ ಜಮೀನು ಬರುತ್ತದೆ ಹೊರತು ಸರ್ಕಾರಿ ಕರಾಬು ಜಮೀನು ಬರುವುದಿಲ್ಲ ಎಂದರೆ ಸರಿಯಲ್ಲ. ಉತ್ತರ ದಿಕ್ಕಿಗೆ ಚಂದ್ರಪ್ಪ ರವರ ಸ್ವಂತ ಜಮೀನು ಬರುತ್ತದೆ ಹೊರತು ಅಶ್ರಪ್ ರವರ ಜಮೀನು ಬರುವುದಿಲ್ಲ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ನಾರಾಯಣಚಾರಿ ರವರ ಜಮೀನು ಬರುತ್ತದೆ ಹೊರತು ಉರುಗ ಬಾಷಾ ರವರ ಜಮೀನು ಬರುವುದಿಲ್ಲ ಎಂದರೆ ಸರಿಯಲ್ಲ.

15. 5 ನೇ ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಚಂದ್ರಪ್ಪ ರವರ ಸ್ವಂತ ಜಮೀನು ಬರುತ್ತದೆ ಹೊರತು ಗ್ರಾಮಠಾಣಾ ಬರುವುದಿಲ್ಲ ಎಂದರೆ ಸರಿಯಲ್ಲ. ಪಶ್ಚಿಮ ದಿಕ್ಕಿಗೆ ಮುಜಾಮಿಲ್ ಪಾಷ ರವರ ಸ್ವಂತ ಜಮೀನು ಬರುತ್ತದೆ ಹೊರತು ಗ್ರಾಮಠಾಣಾ ಬರುವುದಿಲ್ಲ ಎಂದರೆ ಸರಿಯಲ್ಲ. ಉತ್ತರಕ್ಕೆ ಚಂದ್ರಪ್ಪ ರವರ ಸ್ವಂತ ಜಮೀನು ಬರುತ್ತದೆ ಹೊರತು ಚಾಂನ್ ಬಾಷ ರವರ ಮನೆ ಬರುವುದಿಲ್ಲ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಚಂದ್ರಪ್ಪ ರವರ ಸ್ವಂತ ಖಾಲಿ ನಿವೇಶನ ಬರುತ್ತದೆ ಹೊರತು ಸಂಪತ್ ಕುಮಾರ್ ರವರ ಖಾಲಿ ನಿವೇಶನ ಬರುವುದಿಲ್ಲ ಎಂದರೆ ಸರಿಯಲ್ಲ.

16. ದಾವಾ ಆಸ್ತಿ ಸಂಖ್ಯೆ 6 ರಿಂದ 11 ರ ಆಸ್ತಿಗಳ ಚಕ್ಕುಬಂದಿಯನ್ನು ನಾನು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

17. ದಾವಾ ಆಸ್ತಿ 12 ರ ಪೂರ್ವ ದಿಕ್ಕಿಗೆ ನೀಲಗಂಟಿ ತಿಪ್ಪಯ್ಯನ ಜಮೀನು, ಪಶ್ಚಿಮಕ್ಕೆ ಬೇವಹಳ್ಳಿ ಸೋಮಯ್ಯ, ಉತ್ತರಕ್ಕೆ ಬೇವಹಳ್ಳಿ ಸೀನಪ ಹಾಗೂ ದಕ್ಷಿಣಕ್ಕೆ ಖಾದರ್ ಸಾಬಿ ಹಾಗೂ ಚಾಂದ್ ಪಾಷ ರವರ ಜಮೀನುಗಳು ಬರುತ್ತವೆ ಹೊರತು ನಾನು ನಮೂದಿಸಿರುವ ಚಕ್ಕುಬಂದಿ ತಪ್ಪು ಇರುತ್ತದೆ ಎಂದರೆ ಸರಿಯಲ್ಲ.

18. ದಾವಾ ಆಸ್ತಿ 12 ರ ಪೂರ್ವ ದಿಕ್ಕಿಗೆ ಪಟೇಲ್ ವೆಂಕಟರಾಮಯ್ಯ ರವರ ತೆಂಗಿನ ತೋಪು, ಪಶ್ಚಿಮಕ್ಕೆ ನಾರೆಪ್ಪ, ಉತ್ತರಕ್ಕೆ ಭಜಂತ್ರಿ ವೆಂಕಟೇಶಪ್ಪ ರವರ ಜಮೀನುಗಳು ಬರುತ್ತವೆ ಹೊರತು ನಾನು ನಮೂದಿಸಿರುವ ಚಕ್ಕುಬಂದಿ ತಪ್ಪು ಇರುತ್ತದೆ ಎಂದರೆ ಸರಿಯಲ್ಲ.

19. ದಾವಾ ಆಸ್ತಿ 14 ರ ಪೂರ್ವ ದಿಕ್ಕಿಗೆ ಗುಂಡುತೋಪು, ಪಶ್ಚಿಮಕ್ಕೆ ಬೇವಹಳ್ಳಿ ಸಾಮೇಗೌಡ, ಉತ್ತರಕ್ಕೆ ನಾರೆಪ್ಪ ರವರ ಜಮೀನುಗಳು ಬರುತ್ತವೆ ಹೊರತು ನಾನು ನಮೂದಿಸಿರುವ ಚಕ್ಕುಬಂದಿ ತಪ್ಪು ಇರುತ್ತದೆ ಎಂದರೆ ಸರಿಯಲ್ಲ.

20. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

***<u>ಮರುವಿಚಾರಣೆ ಇಲ್ಲ</u>***

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚುಪಡಿಸಲಾಯಿತು.)**

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.